ಸುಲಭವಾಗಿ ಸಾಗಿಸಬಹುದಾಗಿದೆ. ಏಕೆಂದರೆ ಭತ್ತದ ಸಸಿಗಳ ಬೇರುಗಳು ಮಾಧ್ಯಮದೊಂದಿಗೆ ಸೇರಿಕೊಂಡು ಗಟ್ಟಿಯಾಗಿ ಹಿಡಿದುಕೊಂಡಿರುತ್ತದೆ. ಒಂದು ಎಕರೆಗೆ 20 ಸೆಂ.ಮೀ x 50 ಸೆಂ.ಮೀ. ಅಳತೆಯ ಸುಮಾರು 250-350 ಚಾಪೆ ಸಸಿ ಮಡಿಗಳು ಬೇಕಾಗುತ್ತದೆ.

### ಯಾಂತ್ರೀಕೃತ ನಾಟಿ ವಿಧಾನ:

ಈ ವಿಧಾನದ ಯಶಸ್ಸು ಭೂಮಿಯ ಸಿದ್ಧತೆಯ ಮೇಲೆ ಅವಲಂಬಿತ ವಾಗಿರುವುದರಿಂದ ಈ ಕೆಳಗಿನ ಅಂಶಗಳನ್ನು ಪಾಲಿಸಬೇಕು.

- ಗದ್ದೆಯನ್ನು ಚೆನ್ನಾಗಿ ಉಳುಮೆ ಮಾಡಿ ಕೆಸರು ಮಾಡಿದ ನಂತರ ನಾಟಿ ಮಾಡುವ ಭೂಮಿಯು ಸರಿಯಾಗಿ ಸಮತಟ್ಟಾಗಿರುವಂತೆ ತಯಾರಿಸಬೇಕು.
- ಹೆಂಟೆಗಳು, ಹಿಂದಿನ ಬೆಳೆಯ ಅವಶೇಷಗಳು ಅಥವಾ ಯಾವುದೇ ಕಳೆ ಗಿಡಗಳು ಇರಬಾರದು.
- ಉಳುಮೆಯ ಆಳ 15ರಿಂದ 30 ಸೆಂ.ಮೀ. ಗಿಂತ ಹೆಚ್ಚಿರಬಾರದು.
- ನಾಟಿಗೆ ಒಂದು ದಿನ ಮುಂಚಿತವಾಗಿ ಸಸಿ ಮಡಿಗಳಿಂದ ನೀರು ಬಸಿದು ಹೋಗುವಂತೆ ಮಾಡಬೇಕು.

ನಂತರ ಚಾಪೆ ಸಸಿ ಮಡಿಗಳನ್ನು ಹರಿತವಾದ ಚಾಕುವಿನಿಂದ 20 ಸೆಂ.ಮೀ x 50 ಸೆಂ.ಮೀ. ಅಳತೆಗೆ ಕತ್ತರಿಸಿ ನಾಟಿ ಮಾಡಲು ಅನುಕೂಲ ವಾಗುವ ರೀತಿಯಲ್ಲಿ ಜೋಡಿಸಿಕೊಳ್ಳಬೇಕು. ಪ್ರತಿ ಬಾರಿ ಈ ಅಳತೆಯ 8 ಚಾಪೆ ಸಸಿ ಮಡಿಗಳನ್ನು ನಾಟಿ ಯಂತ್ರದಲ್ಲಿ ಜೋಡಿಸಬೇಕು. ಚಾಪೆ ಮಡಿ ಅಥವಾ ಡಾಪೋಗ್ ವಿಧಾನದಲ್ಲಿ ಒತ್ತಾಗಿ ಬೆಳೆಸಿದ ಸಸಿಗಳನ್ನು ಸ್ವಯಂಚಾಲಿತ ಯಂತ್ರದಲ್ಲಿರಿಸಿ ಅದನ್ನು ಚಲಿಸಿದಾಗ ಪ್ರತಿ ಬಾರಿಗೆ ಎಂಟು ಸಾಲಿನಲ್ಲಿ ನಿಗದಿತ ಅಂತರ ಮತ್ತು ಆಳದಲ್ಲಿ ನಾಟಿಯನ್ನು ಮಾಡಿಕೊಂಡು ಹೋಗುತ್ತದೆ. ಯಂತ್ರವನ್ನು ನಡೆಸಲು ಒಬ್ಬ ನುರಿತ ಚಾಲಕ ಹಾಗೂ ಸಸಿಗಳನ್ನು ಒದಗಿಸಲು ಇಬ್ಬರು ಕಾರ್ಮಿಕರು ಬೇಕಾಗುತ್ತಾರೆ. ನಾಲ್ಕು ಜನರ ಸಹಾಯದಿಂದ ದಿನವೊಂದಕ್ಕೆ 2-2.5 ಎಕರೆ ನಾಟಿ ಮಾಡಬಹುದು. ಗೊಬ್ಬರ ಪೂರೈಕೆ, ಕಳೆ ಮತ್ತು ನೀರು ನಿರ್ವಹಣೆ, ಕೀಟ ಮತ್ತು ರೋಗಗಳ ಸಮಗ್ರ ಹತೋಟಿಯನ್ನು ವೈಜ್ಞಾನಿಕ ರೀತಿಯಲ್ಲಿ ಅನುಸರಿಸಿದಾಗ ಉತ್ತಮ ಇಳುವರಿಯನ್ನು ಪಡೆಯಲು ಸಾಧ್ಯವಿದೆ.

### ಭತ್ತದ ನಾಟಿಯಂತ್ರ ಬಳಕೆ

ಭತ್ತದ ಸಸಿಗಳನ್ನು ನಾಟಿ ಮಾಡಲು 2 ವಿಧದ ಯಂತ್ರಗಳು ಲಭ್ಯವಿದೆ.

1. **ಹಿಂದೆ ನಡೆಯುವ ಮಾದರಿ ನಾಟಿಯಂತ್ರ (4 ಸಾಲು)**

   ಈ ಮಾದರಿ ನಾಟಿಯಂತ್ರದಲ್ಲಿ ಸಾಲಿನಿಂದ ಸಾಲಿಗೆ 24 ಸೆಂ.ಮೀ. ಅಂತರ ಹಾಗೂ ನೇಜಿಯಿಂದ ನೇಜಿಗೆ 9 ಸೆಂ.ಮೀ. ದೂರ ಇರುವಂತೆ ಯಂತ್ರವನ್ನು ಮಾರ್ಪಾಡು ಮಾಡಲಾಗಿರುತ್ತದೆ. ನಾಟಿ ವೇಳೆ ನೇಜಿ ಸಂಖ್ಯೆಯನ್ನು (3, 4, 5, 6) ಆಯ್ಕೆ ಮಾಡಿ ನಾಟಿಮಾಡಬಹುದು. ಅಲ್ಲದೇ ನೇಜಿಯನ್ನು ನೆಡುವ ಆಳವನ್ನು ಸಹ ನಿರ್ಧರಿಸಲು ಅವಕಾಶ ಇದೆ. ಈ ಯಂತ್ರದಲ್ಲಿ ಅಗತ್ಯಕ್ಕೆ ತಕ್ಕಂತೆ ಎತ್ತರಿಸಲು ಸಾಧ್ಯವಿರುವುದರಿಂದ ಗದ್ದೆಯಿಂದ ಗದ್ದೆಗೆ ತೆಗೆದುಕೊಂಡು ಹೋಗಲು ಅನುಕೂಲ. ಅಲ್ಲದೆ ಯಂತ್ರದ ಕಾರ್ಯವಿಧಾನದ ಬಗ್ಗೆ ತಿಳಿದುಕೊಂಡಲ್ಲಿ ಮಹಿಳೆಯರು ಸಹ ಈ ಯಂತ್ರವನ್ನು ಚಾಲನೆ ಮಾಡಬಹುದಾಗಿದೆ.

   ಈ ಯಂತ್ರದಲ್ಲಿ ನಾಟಿ ಮಾಡುವ ನಾಲ್ಕು ಸಂಖ್ಯೆಯ ತಟ್ಟೆಗಳು ಜೋಡಿಸಲ್ಪಟ್ಟಿದ್ದು ಏಕಕಾಲದಲ್ಲಿ 4 ಸಾಲುಗಳನ್ನು ನಾಟಿ ಮಾಡಬಹುದಾಗಿದೆ. ಇದು ಸುಮಾರು 175 ಕೆ.ಜಿ. ಭಾರ ಇರುತ್ತದೆ.

2. **ಕುಳಿತು ನಡೆಸುವ ಮಾದರಿ ನಾಟಿಯಂತ್ರ (8 ಸಾಲು)**

   ಈ ಮಾದರಿಯ ನಾಟಿ ಯಂತ್ರದಲ್ಲಿ ಎಂಟು ಸಂಖ್ಯೆಯ ತಟ್ಟೆಗಳು ಜೋಡಿಸಲ್ಪಟ್ಟಿದ್ದು ಏಕಕಾಲದಲ್ಲಿ 8 ಸಾಲುಗಳನ್ನು ನಾಟಿ ಮಾಡಬಹುದಾಗಿದೆ. ಸಾಲಿನಿಂದ ಸಾಲಿಗೆ 22.5 ಸೆ.ಮೀ. ಹಾಗೂ ಸಸಿಯಿಂದ ಸಸಿಗೆ 17-20 ವರೆಗೆ ಮಾರ್ಪಾಡು ಮಾಡಲು ಅವಕಾಶವಿದೆ. ಇದು ಸುಮಾರು 305 ಕೆ.ಜಿ. ಭಾರ ಇರುತ್ತದೆ. ಈ ಯಂತ್ರವನ್ನು ಚಲಾಯಿಸಿದಾಗ ಪ್ರತಿ ಬಾರಿ ಎಂಟು ಸಾಲಿನಲ್ಲಿ ನಿಗದಿತ ಅಂತರ ಹಾಗೂ ಆಳದಲ್ಲಿ ಸ್ವಯಂಚಾಲಿತವಾಗಿ ನಾಟಿಯನ್ನು ಮಾಡಿಕೊಂಡು ಹೋಗುತ್ತದೆ. ಪ್ರತಿ ಎಕರೆ ನಾಟಿ ಮಾಡಲು ಸುಮಾರು ಎರಡುವರೆ ಗಂಟೆಗಳ ಸಮಯ ಬೇಕಾಗುತ್ತದೆ. ಯಂತ್ರವನ್ನು ನಡೆಸಲು ಒಬ್ಬ ಕುಶಲಕರ್ಮಿ ಚಾಲಕ ಮತ್ತು ಸಹಾಯಕ್ಕೆ ಎರಡು ಜನ ಕಾರ್ಮಿಕರು ಬೇಕಾಗುತ್ತಾರೆ. ಮೂರುಜನರ ಸಹಾಯದಿಂದ ದಿನವೊಂದಕ್ಕೆ ಸುಮಾರು 2-2.5 ಎಕರೆ ನಾಟಿ ಮಾಡಬಹುದಾಗಿದೆ.

### ಯಾಂತ್ರಿಕ ನಾಟಿ ವ್ಯತ್ಯಾಸ - ಅನುಕೂಲ

ಸಾಂಪ್ರದಾಯಿಕ ಪದ್ಧತಿಯಲ್ಲಿ ಒಂದು ಎಕರೆ ಗದ್ದೆಗೆ ಬೇಕಾದ ನೇಜಿ ತೆಗೆದು ನಾಟಿ ಮಾಡಲು 40 ಆಳುಗಳು ಅಗತ್ಯ ಪ್ರತಿಯೊಬ್ಬರಿಗೆ ಕೂಲಿ ರೂ.150ರಂತೆ ಹಿಡಿದರೂ ಒಂದು ಎಕರೆ ನೇಜಿ ನಾಟಿಗೆ ರೂ. 4500 ವೆಚ್ಚ ಆಗುತ್ತದೆ. ಅದೇ ಕೆಲಸವನ್ನು ಯಂತ್ರದಿಂದ ಮಾಡುವುದಾದರೆ 5 ಜನ ಸಾಕು ಒಂದು ಎಕರೆ ಗದ್ದೆಯನ್ನು ಹಿಂದೆ ನಡೆಯುವ ಮಾದರಿ ನಾಟಿ ಯಂತ್ರದಿಂದ ಕೇವಲ 2-3 ಗಂಟೆಯಲ್ಲಿ ನಾಟಿ ಮಾಡಿ ಮುಗಿಸುತ್ತದೆ. ಇದರ ವೆಚ್ಚ ಸುಮಾರು ರೂ.1800 - 2000 ವರೆಗೆ ಆಗಬಹುದು.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ**

ಕೃಷಿ ವಿಜ್ಞಾನ ಕೇಂದ್ರ (ದ.ಕ.)
ಕಂಕನಾಡಿ, ಮಂಗಳೂರು-575 002
ಫೋನ್: 0824-2431872, ಫ್ಯಾಕ್ಸ್: 0824-2430060
E-mail: kvkdk@rediffmail.com Website: www.kvkdk.org



ಕರ್ನಾಟಕ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಕೃಷಿ ವಿಜ್ಞಾನ ಕೇಂದ್ರ
ದಕ್ಷಿಣ ಕನ್ನಡ


# ಭತ್ತದಲ್ಲಿ ಯಾಂತ್ರಿಕೃತ ನಾಟಿ ಪದ್ಧತಿ






ತಾಂತ್ರಿಕ ಮಾಹಿತಿ
ಶ್ರೀ ಹರೀಶ್ ಶೆಣೈ
ಡಾ. ಹೆಚ್. ಹನುಮಂತಪ್ಪ
ಕು. ಭಾಗ್ಯಶ್ರೀ. ಸಿ

**ಕೃಷಿ ವಿಜ್ಞಾನ ಕೇಂದ್ರ (ದ.ಕ.)**
ಕಂಕನಾಡಿ, ಮಂಗಳೂರು-575 002


**2014**

# ಭತ್ತದಲ್ಲಿ ಯಾಂತ್ರಿಕೃತ ನಾಟಿ ಪದ್ಧತಿ

ಭತ್ತ ಕರಾವಳಿ ಪ್ರದೇಶದ ಪ್ರಮುಖ ಆಹಾರ ಬೆಳೆಯಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸುಮಾರು 55,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಭತ್ತವನ್ನು ಬೆಟ್ಟು, ಮಜಲು, ಬಯಲು ಮುಂತಾದ ಸನ್ನಿವೇಶದಲ್ಲೂ ಹಾಗೂ ಕಾರ್ತಿ (ಏಣೆಲು) ಸುಗ್ಗಿ, ಕೊಳಕೆ ಮುಂತಾದ ಹಂಗಾಮಿನಲ್ಲಿ ಪರಂಪರಾಗತವಾಗಿ ಬೆಳೆದುಕೊಂಡು ಬರಲಾಗುತ್ತಿದೆ. ಭತ್ತದಲ್ಲಿ ಅಧಿಕ ಇಳುವರಿ ಪಡೆಯಲು ಉತ್ತಮ ಹವಾಮಾನ ವಾರ್ಷಿಕ ಮಳೆ, ಮಣ್ಣು ಮುಂತಾದ ಅನುಕೂಲಕರ ವಾದ ವಾತಾವರಣವಿದ್ದರೂ ಸಹ ವರ್ಷದಿಂದ ವರ್ಷಕ್ಕೆ, ಭತ್ತದ ಕೃಷಿ ಕ್ಷೇತ್ರ ಕಡಿಮೆಯಾಗುತ್ತಿರುವುದು ಒಂದು ಆತಂಕಕಾರಿ ಸಂಗತಿಯಾಗಿದೆ. ಪ್ರಸಕ್ತ ದಿನಗಳಲ್ಲಿ ಕೂಲಿಯ ಆಳುಗಳ ಕೊರತೆ, ಹೆಚ್ಚಿನ ಕೂಲಿ, ಏರುತ್ತಿರುವ ಕೃಷಿ ಪರಿಕರಗಳ ಬೆಲೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ ಮುಂತಾದ ಕಾರಣಗಳಿಂದ ಕೃಷಿಕರು ಭತ್ತದ ಬೇಸಾಯ ಲಾಭದಾಯಕವಲ್ಲಾ ಎಂಬ ಭಾವನೆಯಿಂದ ಭತ್ತದ ಬೆಳೆ ಬೆಳೆಯುವಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಫಲವತ್ತಾದ ಭತ್ತದ ಗದ್ದೆಗಳನ್ನು ವಾಣಿಜ್ಯ ಬೆಳೆಗಳಾದ ರಬ್ಬರ್, ಅಡಿಕೆ ತೋಟಗಳಾಗಿ ಪರಿವರ್ತಿಸುತ್ತಿದ್ದಾರೆ ಮಾತ್ರವಲ್ಲದೆ ಭತ್ತದ ಗದ್ದೆಯನ್ನು ಪಡೀಲು ಬಿಡುವ ಸನ್ನವೇಶಗಳು ಸಹ ಕಂಡುಬರುತ್ತಿದೆ. ಆದರೆ ದಿನದ ಮೂರು ಹೊತ್ತು ಆಹಾರವಾಗಿ ಅಕ್ಕಿಯನ್ನು ಬಳಸುವ ಈ ಪ್ರದೇಶದಲ್ಲಿ ಸ್ಥಳೀಯ ಆಹಾರ ಸುರಕ್ಷತೆಯ ದೃಷ್ಟಿಯಿಂದ ಭತ್ತದ ಕೃಷಿ ಅನಿವಾರ್ಯ ಮಾತ್ರವಲ್ಲದೆ ಅವಶ್ಯಕತೆಯು ಹೌದು.

ಬದಲಾದ ಸನ್ನಿವೇಶಕ್ಕೆ, ತಕ್ಕಂತೆ ಅಭಿವೃದ್ಧಿಯಾದ ನೂತನ ತಾಂತ್ರಿಕತೆಯನ್ನು ಬಳಸಿ ಸೂಕ್ತ ಬೇಸಾಯ ಕ್ರಮಗಳನ್ನು ಭತ್ತದ ಕೃಷಿಯಲ್ಲಿ ಅಳವಡಿಸುವುದರಿಂದ ಅಧಿಕ ಇಳುವರಿ ಪಡೆಯುವುದು ಮಾತ್ರವಲ್ಲದೆ ಭತ್ತದ ಕೃಷಿಯನ್ನು ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ.

ಸಾಂಪ್ರದಾಯಿಕ ನಾಟಿ ಪದ್ಧತಿಯಲ್ಲಿ ಸೂಕ್ತ ಆಳ ಅಂತರದಲ್ಲಿ ಸಸಿಗಳ ನಾಟಿ ಮತ್ತು ನಿಗದಿತ ಸಸಿಗಳ ಸಂಖ್ಯೆ ಕಾಪಾಡಲು ಸಾಧ್ಯವಾಗದೆ ಇಳುವರಿ ಹೆಚ್ಚಿಸುವಲ್ಲಿ ಪ್ರಮುಖ ಅಡಚಣೆಯಾಗಿದೆ. ಭತ್ತ ಒಂದು ಅಧಿಕ ಆಳಿನ ಅವಶ್ಯಕತೆಯನ್ನು ಬಯಸುವ ಬೆಳೆಯಾಗಿದ್ದು ಭತ್ತದ ಬೇಸಾಯದಲ್ಲಿ ಬಳಸುವ ಒಟ್ಟು ಆಳುಗಳ ಪ್ರಮಾಣದಲ್ಲಿ ಅರ್ಧದಷ್ಟುಆಳುಗಳುಭೂಮಿಯನ್ನುಹದಮಾಡಲುಮತ್ತುಪೈರುನಾಟಿ ಮಾಡಲು ಬೇಕಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರ್ಮಿಕರ ಕೊರತೆ ಹೆಚ್ಚಾಗುತ್ತಿದ್ದು, ಸಮಯಕ್ಕೆ ಸರಿಯಾಗಿ ನಾಟಿ ಮಾಡಲು ಸಾಧ್ಯವಾಗುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಭತ್ತದ ಸಸಿ ನಾಟಿಯನ್ನು ಯಂತ್ರಗಳಿಂದ ಮಾಡಿಸಿ ಆಳುಗಳ ಖರ್ಚಿನ ಉಳಿತಾಯ ಮಾಡಬಹುದು.

### ನಾಟಿ ಯಂತ್ರದ ಬಳಕೆ ಹಾಗೂ ಉಪಯೋಗಗಳು:

- ಕೃಷಿ ಕಾರ್ಮಿಕರ ಸಂಖ್ಯೆ ಮತ್ತು ಅಗತ್ಯತೆಗಳನ್ನು ಕಡಿಮೆಗೊಳಿಸಬಹುದು.
- ಸಮಯಕ್ಕೆ ಸರಿಯಾಗಿ, ಸರಿಯಾದ ಆಳ ಮತ್ತು ಅಂತರದಲ್ಲಿ ನಾಟಿ ಮಾಡಬಹುದು.
- ಪ್ರತಿ ಚದರ ಮೀಟರ್ ಪ್ರದೇಶದಲ್ಲಿ ಸೂಕ್ತ ಸಸ್ಯ ಸಂಖ್ಯೆಯನ್ನು ಕಾಪಾಡಬಹುದು.
- ಕಳೆ ಯಂತ್ರ (ಕೊನೋವೀಡರ್) ಬಳಸಿ ಅಂತರ ಬೇಸಾಯ ಮಾಡಿ ಎಲ್ಲಾ ರೀತಿಯ ಕಳೆ ನಿಯಂತ್ರಿಸಬಹುದು.
- ಸುಮಾರು ಎರಡುವರೆಯಿಂದ 3 ಗಂಟೆಗಳ ಅವಧಿಯಲ್ಲಿ ಒಂದು ಎಕರೆ ನಾಟಿ ಮಾಡಬಹುದು.
- ಕೇವಲ 2ರಿಂದ 3 ಜನ ಕಾರ್ಮಿಕರ ಸಹಾಯದಿಂದ ದಿನವೊಂದಕ್ಕೆ 3ರಿಂದ 4 ಎಕರೆ ನಾಟಿ ಮಾಡಬಹುದು.
- ಎಕರೆಗೆ ಸುಮಾರು ರೂ. 1000ದವರೆಗೂ ಉತ್ಪಾದನಾ ವೆಚ್ಚದಲ್ಲಿ ಉಳಿತಾಯ.
- ಶೇ. 10-15ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು.

### ನಾಟಿ ಯಂತ್ರದ ಬಳಕೆ:

ನಾಟಿಯಂತ್ರದ ಬಳಕೆಯಲ್ಲಿ ಎರಡು ಪ್ರಮುಖ ಚಟುವಟಿಕೆಗಳು ಇದ್ದು, ಇವುಗಳು ಚಾಪೆನೇಜಿ ತಯಾರಿಕೆ ಹಾಗೂ ನಾಟಿ ಯಂತ್ರದ ಬಳಕೆ.

### ಚಾಪೆ ನೇಜಿ:

ಈಗ ಬಳಕೆಯಲ್ಲಿ ಇರುವ ನಾಟಿಯಂತ್ರಕ್ಕೆ ನಾಟಿ ಮಾಡಲು ರೈತರು ಸಾಮಾನ್ಯ ಪದ್ಧತಿಯಲ್ಲಿ ಬೆಳೆಸಿದಂತಹ ಸಸಿಮಡಿ ಸೂಕ್ತವಾಗಿರುವುದಿಲ್ಲ, ಏಕೆಂದರೆ ಇಲ್ಲಿ ಸಸಿಮಡಿಯ ಬೇರುಗಳು ಉದ್ದ ಸಮನಾಗಿರುವುದಿಲ್ಲ. ಹಾಗೂ ಸಸಿಮಡಿ ಎಷ್ಟು ಆಳದವರೆಗೆ ಇರುತ್ತದೆ ಎಂದು ತಿಳಿದಿರುವುದಿಲ್ಲ. ಈ ಕಾರಣದಿಂದ ರೈತರು ಸಾಮಾನ್ಯವಾಗಿ ಬೆಳೆಸಿರುವ ಸಸಿಮಡಿ ಯಾಂತ್ರೀಕೃತ ಭತ್ತನಾಟಿ ಮಾಡುವ ಯಂತ್ರಕ್ಕೆ ಸೂಕ್ತವಾಗಿರುವುದಿಲ್ಲ.

ಯಂತ್ರಗಳನ್ನು ಬಳಸಿ ಹದ ಮಾಡಿದ ಕೆಸರು ಗದ್ದೆಯಲ್ಲಿ ಸಸಿ ನಾಟಿ ಮಾಡಬೇಕಾದರೆ ಭತ್ತದ ಸಸಿ ಮಡಿಯನ್ನು ಚಾಪೆ ಮಾದರಿ ಅಥವಾ ಪರಿಷ್ಕೃತ ಡಾಪೋಗ್ ಮಾದರಿಯಲ್ಲಿ ಬೆಳೆಸಲಾಗುತ್ತದೆ. ಚಾಪೆ ನೇಜಿ ಎಂದರೆ ಚಾಪೆಯಂತೆ ಭತ್ತದ ಸಸಿಗಳನ್ನು ಸಿದ್ಧಪಡಿಸುವ ವಿಧಾನ. ಕಡಿಮೆ ಸ್ಥಳವಕಾಶದಲ್ಲಿ ಯಾವುದೇ ವಿಶೇಷ ಖರ್ಚು ಇಲ್ಲದೆ, ಮಾಡಬಹುದಾದ ಅತಿ ಸಾಂದ್ರದ ಸಸಿ ತಯಾರಿಕಾ ವಿಧಾನ.

### ಚಾಪೆ ನೇಜಿ ವಿಧಾನ:

- ಈ ವಿಧಾನದಲ್ಲಿ ಪ್ಲಾಸ್ಟಿಕ್ ಹಾಳೆಯನ್ನು ಬಳಸಿ ಹೊರಾಂಗಣದಲ್ಲಿ ಅಥವಾ ಭಾಗಶ: ಬಿಸಿಲು ಬೀಳುವ ಒಳಾವರಣದಲ್ಲಿ, ಗದ್ದೆಯಲ್ಲಿ ಗಟ್ಟಿ ನೆಲದಲ್ಲಿ ಕಲ್ಲುಹಾಸು, ಸಿಮೆಂಟ್ ನೆಲ ಮುಂತಾದೆಡೆಗಳಲ್ಲಿ ಸಸಿ ಮಡಿ ತಯಾರಿಸಬಹುದು. ಪೂರ್ಣಬಿಸಿಲು ಬೀಳುವಂತಿದ್ದರೆ ಉತ್ತಮವಾದರೂ ಅಲ್ಪ ಸ್ವಲ್ಪ ನೆರಳಿನಿಂದ ಹೆಚ್ಚಿನ ತೊಂದರೆಯಾಗದು.
- ಒಂದು ಮೀಟರ್ ಅಗಲ ಹತ್ತು ಸೆಂ.ಮೀ. ಎತ್ತರದ ಒಣ ಮಡಿ ತಯಾರಿಸಿ ಮೇಲ್ಮೈಯನ್ನು ಮಟ್ಟ ಮಾಡಿ ಅದರ ಮೇಲೆ ತೆಳು ಪ್ಲಾಸ್ಟಿಕ್ ಹಾಳೆಯನ್ನು ಹರಡಬೇಕು.
- ಪ್ಲಾಸ್ಟಿಕ್ ಹಾಳೆಯ ಮೇಲೆ ಎರಡು ಸೆಂ.ಮೀ. ದಪ್ಪ ಬರುವಂತೆ ಹುಡಿಯಾದ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಮತ್ತು ಹುಡಿ ಮಣ್ಣನ್ನು ಸಮ ಪ್ರಮಾಣದಲ್ಲಿ ಬೆರೆಸಿ ಹರಡಬೇಕು.
- ಮೊಳಕೆ ಬರಿಸಿದ ಬೀಜವನ್ನು ಈ ಮಿಶ್ರಣದ ಮೇಲೆ ಪ್ರತಿ ಚದುರ ಸೆಂ.ಮೀ.ಗೆ ಸುಮಾರು ಐದು ಬೀಜ ಬೀಳುವಂತೆ ಒಂದು ಚ.ಮಿ.ಗೆ ಒಂದು ಕೆ.ಜಿ.(ಒಣ ತೂಕ) ಬೀಜವು ಬೀಳುವಂತೆ ಒಂದೇ ಸಮನಾಗಿ ಬಿತ್ತಬೇಕು. ಬೀಜಗಳನ್ನು ಹರಡಿ ಮಣ್ಣಿನೊಂದಿಗೆ ಉತ್ತಮ ಸಂಪರ್ಕ ಸಾಧಿಸುವಂತೆ ಕೈಯಿಂದ ಅಥವಾ ಮರದ ಹಲಗೆಯಿಂದ ಮೃದುವಾಗಿ ತಟ್ಟಬೇಕು.
- ತೇವ ಆರದಂತೆ ಮತ್ತು ಹಕ್ಕಿಗಳಿಂದ ರಕ್ಷಿಸಲು ಆರಂಭದ ಮೂರು - ನಾಲ್ಕು ದಿನಗಳವರೆಗೆ ಭತ್ತದ ಸಸಿ ಮಡಿಯನ್ನು ಹುಲ್ಲಿನಿಂದ ಮುಚ್ಚಬೇಕು. ಮೊಳಕೆ ಬರುವವರೆಗೂ ದಿನಕ್ಕೆ ಮೂರು ಬಾರಿ, ನಂತರದ ದಿನಗಳಲ್ಲಿ ವಾತಾವರಣದ ಪರಿಸ್ಥಿತಿಗನುಗುಣ ವಾಗಿ ಎರಡು ಅಥವಾ ಮೂರು ಬಾರಿ ಮಣ್ಣು ಕೊಚ್ಚದಂತೆ ನಿಧಾನವಾಗಿ ನೀರುಣಿಸಬೇಕು.
- ಮೂರು ನಾಲ್ಕು ದಿನದ ನಂತರ ಹುಲ್ಲಿನ ಹೊದಿಕೆಯನ್ನು ತೆಗೆಯಬೇಕು ಈ ವಿಧಾನದಲ್ಲಿ 18ರಿಂದ 20 ದಿನಗಳಲ್ಲಿ ಸಸಿಗಳು ನಾಟಿಗೆ ಸಿದ್ಧವಾಗಿರುತ್ತದೆ.
- ಕೈಯಿಂದ ನಾಟಿ ಮಾಡುವ ಪದ್ಧತಿಗೂ ಸಹ ಇದೊಂದು ಉತ್ತಮ ತಯಾರಿಯ ವಿಧಾನ. ಕಡಿಮೆ ಸ್ಥಳದಲ್ಲಿ ಕಡಿಮೆ ವೆಚ್ಚದಲ್ಲಿ ಉತ್ತಮ ಸಸಿಗಳು ತಯಾರಾಗುವುದಲ್ಲದೆ, ಕಳೆಗಳಿಂದ ಹಾಗೂ ಇತರ ಭತ್ತದ ತಳಿಗಳ ಬೆರೆಕೆಯಿಂದ ಮುಕ್ತವಾಗಿರುತ್ತದೆ.

ಈ ವಿಧಾನದಿಂದ ಕಡಿಮೆ ಪ್ರದೇಶ ಹಾಗೂ ವೆಚ್ಚದಲ್ಲಿ ಉತ್ತಮ ಸಸಿಗಳು ತಯಾರಾಗುವುದಲ್ಲದೆ ಸಸಿ ಮಡಿಯಲ್ಲಿ ಕಳೆಗಳನ್ನು ತೆಗೆಯುವ ಪ್ರಮೇಯವಿರುವುದಿಲ್ಲ ಹಾಗೂ ಸಸಿಗಳನ್ನು ಕೀಳುವ ಮತ್ತು ಬೇರುಗಳಿಗೆ ಅಂಟಿಕೊಂಡಿರುವ ಮಣ್ಣನ್ನು ತೊಳೆಯುವ ಶ್ರಮವಿರುವುದಿಲ್ಲ. ನಾಟಿಯ ಸಮಯದಲ್ಲಿ ಸಸಿಮಡಿಯನ್ನು ಚಾಪೆಯಂತೆ ಸುತ್ತಿ ಒಂದೆಡೆಯಿಂದ ಇನ್ನೊಂದೆಡೆಗೆ